International Journal of Humanities and Social Science Research
ISSN: 2455-2070; Impact Factor: RJIF 5.22
www.socialresearchjournals.com
Volume 2; Issue 9; September 2016; Page No. 77-81

# ಮಹಿಳಾ ಸಬಲೀಕರಣಕ್ಕೆ ಇಂದಿಗೂ ಅಡ್ಡಿಯಾಗಿರುವ ಧಾರ್ಮಿಕ ಅಂಶಗಳು–ವಿಶೇಷವಾಗಿ ನಾಗಮಂಗಲ ತಾಲ್ಲೂಕಿಗೆ ಸಂಬಂಧಿಸಿದಂತೆ

[1] ಡಾ. ಯೋಗನರಸಿಂಹಚಾರಿ. ಕೆ, [2] ಶ್ರೀಮತಿ. ವಿಜಯಲಕ್ಷ್ಮೀ. ಎನ್.

[1] ಸಹಾಯಕ ಪ್ರಾಧ್ಯಾಪಕರುಸಮಾಜ, ಶಾಸ್ತ್ರ ವಿಭಾಗ, ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ– 571401, ಕರ್ನಾಟಕ ರಾಜ್ಯ
[2] ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ– 572216 ತುಮಕೂರು ಜಿಲ್ಲೆ., ಕರ್ನಾಟಕ ರಾಜ್ಯ

## ಪೀಠಿಕೆ

ಪ್ರಪಂಚದ ಪ್ರಮುಖ ಧರ್ಮಗಳಲ್ಲಿ ಮಹಿಳೆ ಪುರುಷನಿಗೆ ಅಧೀನವಾಗಿರುವುದನ್ನೇ ಆದರ್ಶವೆನ್ನಲಾಗಿದೆ. ಇರಾನಿನ ಜೊರಾಸ್ಟರ್ ಧರ್ಮದಲ್ಲಿ ಹೆಣ್ಣು ಅಮಂಗಲೆಯಾಗಿದ್ದು ಹೆಣ್ಣಿನ ವ್ಯಕ್ತಿತ್ವವನ್ನು ಬಿಂಬಿಸಿರುವ ರೀತಿಯಲ್ಲಿಯೇ ಆಕೆಯ ಸ್ಥಿತಿಯನ್ನು ಅರಿಯಬಹುದು.

"ನಿಮ್ಮ ಹೆಂಗಸರಲ್ಲಿ ನಂಬಿಕೆ ಇಡಬೇಡಿ, ಇಟ್ಟರೆ ನೀವು ಪಶ್ಚಾತ್ತಾಪ ಪಡುವ ಸಂದರ್ಭ ಬಂದೀತು ಎಂಬುದು ಜೋರಾಷ್ಟ್ರಿಯನ್ನರ ಅಭಿಪ್ರಾಯ.

"ಯಹೂದ್ಯರ ಪ್ರಾರ್ಥನೆಯಲ್ಲಿ "ದೇವರೇ, ನೀನು ನನ್ನನ್ನು ಹೆಣ್ಣಾಗಿ ಸೃಷ್ಟಿ ಮಾಡಲಿಲ್ಲವಾದ್ದರಿಂದ ನಾನು ಧನ್ಯನಾದೆ" ಎಂಬುದು ಹೆಣ್ಣಿನ ಬಗ್ಗೆ ಯಹೂದಿಗಳು ಹೊಂದಿದ ಕೀಳರಿಮೆಯನ್ನು ತೋರಿಸುತ್ತದೆ.

ಅರಿಸ್ಟಾಟಲ್ ಒಬ್ಬ ದಾರ್ಶನಿಕನಾಗಿದ್ದರೂ, 'ಬುದ್ದಿ ಜೀವಿಗೆ ಶ್ರಮಜೀವಿ ಸೇವಕನಾಗುವಂತೆ, ಗಂಡಿಗೆ ಹೆಣ್ಣು ಅಧೀನಳಾಗಿರಬೇಕು' ಎನ್ನುವ ಹೇಳಿಕೆ ಮಹಿಳೆಯ ಸ್ಥಾನವನ್ನು ನಿರ್ಧರಿಸಿ ದುರ್ಬಲಗೊಳಿಸಲಾಗಿದೆ.

ಕ್ರೈಸ್ತ ಧರ್ಮದಲ್ಲಿ (ಸೇಂಟ್ ಥಾಮಸ್) "ಹೆಂಗಸು ಎಂದರೆ ಅಪರಿಪೂರ್ಣ ಗಂಡಸು ಈಕೆ ಯಾವುದೇ ಧಾರ್ಮಿಕ ಕಾರ್ಯಗಳಿಗೆ ಅರ್ಹಳಲ್ಲ ಹೆಣ್ಣಿನ ದೇಹವೇ ಪಾಪದ ಮೂಲ. ಶೋಷಣೆಯ ಮೂಲ" ಎನ್ನಲಾಗಿದೆ.

ಇಸ್ಲಾಂ ಧರ್ಮದಲ್ಲಿ ಮಹಿಳೆಯನ್ನು ಧಾರ್ಮಿಕವಾಗಿ ದ್ವಿತೀಯ ದರ್ಜೆಯ ವ್ಯಕ್ತಿಯನ್ನಾಗಿ ಬಿಂಬಿಸಲಾಗುತ್ತಿದೆ. ಮಸೀದಿಯ ಹತ್ತಿರಕ್ಕೂ ಬಿಟ್ಟುಕೊಳ್ಳದ ಸ್ಥಿತಿ ನಿರ್ಮಿಸಿ ಪುರುಷ ಪ್ರಾಧಾನ್ಯತೆ ಉಳಿಸಿಕೊಳ್ಳಲಾಗಿದೆ.

ಹಿಂದೂ ಶಾಸ್ತ್ರಕಾರರು, ಸ್ಮೃತಿಕಾರರು, ವೇದಗಳಿಂದ ಪ್ರೇರಿತರಾಗಿ ಮಹಿಳೆಯರ ಧಾರ್ಮಿಕ ಕ್ರಿಯಾವಿಧಿಗಳ ಬಗ್ಗೆ ನಿಂದನಾತ್ಮಕವಾಗಿಯೇ ಬರೆದಿದ್ದಾರೆ. ಮನು ತನ್ನ ಧರ್ಮಶಾಸ್ತ್ರದಲ್ಲಿ "ಸ್ತ್ರೀ ಧರ್ಮಾಚರಣೆಗೆ ಯೋಗ್ಯಳಲ್ಲ, ಯಜ್ಞಗಳನ್ನು ಮಾಡಬಾರದು, ಮಾಡಿದರೆ ಆಕೆ ನರಕಕ್ಕೆ ಹೋಗುತ್ತಾಳೆ, ಸ್ತ್ರೀ ನೆರವೇರಿಸಿದ ಯಜ್ಞದಲ್ಲಿ ಬ್ರಾಹ್ಮಣರೂ ಊಟಮಾಡಬಾರದು. ಮಹಿಳೆ ಯಾವಾಗಲೂ ದ್ರೌಪದಿಯಂತೆ ಪಣದ ವಸ್ತುವಿನಂತಿರಬೇಕು" ಎಂದು ಬಯಸುತ್ತಾನೆ. ಇಂದಿಗೂ ಮಹಿಳೆ ಯಾವುದೇ ದೇವರ ಗರ್ಭಗುಡಿಗೆ ಪ್ರವೇಶ ಪಡೆಯುವ ಸ್ಥಿತಿ ಇದ್ದಂತಿಲ್ಲ. ವೇದಗಳಿಂದ ಪ್ರೇರಿತರಾದ ಇಂತಹ ವಿಕಲ್ಪಿತ ಮನಃಸ್ಥಿತಿಯ ಚಿಂತನಕಾರರು, ಶಾಸ್ತ್ರಕಾರರು, ವೇದಗಳ ಕಾಲದ ಮಹಿಳಾ ವಿರೋಧಿ ನಿಯಮಗಳನ್ನು ಹಾಗೆಯೇ ಜೀವಂತವಿರಿಸಿದ್ದರ ಪ್ರತಿಫಲ ಇಂದಿಗೂ ಅದೇ ಸ್ಥಿತಿ ಬೇರೆ ಬೇರೆ ಸ್ವರೂಪದಲ್ಲಿ ವ್ಯಕ್ತಗೊಳ್ಳುತ್ತಿದೆ,

ರಾಮಾಯಣ, ಮಹಾಭಾರತದಂತಹ ಮಹಾ ಕಾವ್ಯಗಳಲ್ಲಿಯೂ ಸೀತೆ, ಕುಂತಿ, ದ್ರೌಪದಿ, ಗಾಂಧಾರಿ ಇವರೇ ಮೊದಲಾದ ಮಹಿಳೆಯರು ಪುರುಷ ಧರ್ಮದ ಸುಳಿಯಲ್ಲಿ ಸಿಲುಕಿಕೊಂಡಿದ್ದು ಅಲ್ಲಿಯೂ ಮಹಿಳೆಯನ್ನು ಬಂಧಿಸಲಾಗಿದೆ. ಪುರುಷರ ಧರ್ಮ ಪರಿಪಾಲನೆಗಾಗಿ ಸ್ತ್ರೀಯರ ಸ್ವಾತಂತ್ರ್ಯವನ್ನು ಹನನ ಮಾಡಲಾಗಿದೆ. ಕೆಲವೊಮ್ಮೆ ಆದರ್ಶದ ಕಾರಣಕ್ಕಾಗಿ ಬಲಿಪಶುಗಳಾಗಿದ್ದಾರೆ. ಮೊಗಲರ ಕಾಲದಲ್ಲಿ ಭಾರತದ ಮಹಿಳೆಯರ ಧಾರ್ಮಿಕ ಸ್ಥಿತಿ ಶೋಚನೀಯವಾಗಿತ್ತು. ಬ್ರಿಟಿಷ್ ಕಾಲಾವಧಿಯಲ್ಲಿ ಇದಕ್ಕಿಂತ ಭಿನ್ನವಾದದ ಸ್ಥಿತಿ ಇರಲಿಲ್ಲ ಬ್ರಿಟೀಷರು ಮಹಿಳಾ ಸಬಲೀಕರಣಕ್ಕಾಗಿ ಯಾವುದೇ ಕ್ರಿಯಾತ್ಮಕ ಬದಲಾವಣೆಯ ತರಲು ಚಿಂತಿಸಲಿಲ್ಲ. ಸತಿ ಪದ್ಧತಿ, ಬಾಲ್ಯ ವಿವಾಹ, ದೇವದಾಸಿ ಪದ್ಧತಿ ಅಲ್ಪ ಬದಲಾವಣೆಗಳೊಂದಿಗೆ ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಸತಿ ಧರ್ಮದ ಕಾರಣಕ್ಕಾಗಿ ಸತಿ ಸಹಗಮನ ಪದ್ಧತಿ ಜಾರಿಯಲ್ಲಿದ್ದು ಮಹಿಳಾ ಜಂಘಾಬಲವನ್ನೇ ಕುಗ್ಗಿಸಿತ್ತು. ಧಾರ್ಮಿಕ ದಾಳಿಗೆ ಹೆದರಿ ಅವಕುಂಠನ ಪದ್ಧತಿ ಜಾರಿಗೆ ತರಲಾಗಿತ್ತು. ದೇವಾಲಯಗಳಲ್ಲಿ ಆಗಮಿಕರು, ಭಕ್ತರು, ಅರ್ಚಕರನ್ನು ತೃಪ್ತಿಪಡಿಸಲು ಧರ್ಮದ ಹೆಸರಿನಲ್ಲಿ ದೇವದಾಸಿ ಪದ್ಧತಿ ಜಾರಿಗೊಂಡು ಕಾಲಾ ನಂತರ ವೇಶ್ಯಾವಾಟಿಕೆಗೆ ಅವಕಾಶ ಕಲ್ಪಿಸಿತು. ಬಸವಿ ಬಿಡುವ ಪದ್ಧತಿಯು ದೇವರನ್ನು ತೃಪ್ತಿ ಪಡಿಸುವ ಅಥವಾ ಹರಕೆ ತೀರಿಸುವ ಒಂದು ಪದ್ದತಿಯೇ ಆಗಿದೆ. ಆದರೆ ಇದಾವುದಕ್ಕೂ ಪುರುಷರನ್ನು ಬಳಸಿಲ್ಲದಿರುವುದು ಮಹಿಳಾ ಸಬಲೀಕರಣಕ್ಕೆ ಬಹಳ ಹಿಂದಿನಿಂದಲೂ ವ್ಯವಸ್ಥಿತ ಹಿನ್ನಡೆಯಾಗಿರುವುದು ಕಂಡುಬರುತ್ತದೆ. ವಿಧವಾ ಪದ್ಧತಿ ಇಂದಿಗೂ ಜಾರಿಯಲ್ಲಿದ್ದು, ಮಹಿಳೆಯರನ್ನು ಗೃಹ ಬಂಧನದಲ್ಲಿಡುವುದಾಗಿದೆ,. ಇದು ಆಕೆಯ ಸಂಪೂರ್ಣ ಸ್ವಾತಂತ್ರ್ಯ ಮತ್ತು ಭಾಗವಹಿಸುವಿಕೆಯನ್ನು ನಿಷೇಧಿಸಿದ್ದು, ಧರ್ಮದ ಹೆಸರಿನಲ್ಲಿ ಮಹಿಳೆಯನ್ನು ಶೋಷಿಸಲಾಗಿದೆ.

## ಉದ್ದೇಶಗಳು

- ಮಹಿಳಾ ಸಬಲೀಕರಣದ ಸ್ವರೂಪವನ್ನು ತಿಳಿಯುವುದು.
- ಸ್ವಾತಂತ್ರ್ಯ ವಂಚಿತ ಮಹಿಳಾ ಸಮುದಾಯದ ಸಮಸ್ಯೆಗಳನ್ನು ತಿಳಿಯುವುದು.
- ಪುರುಷ ಪ್ರಾಧಾನ್ಯತೆಗಾಗಿ ಬಲಿಯಾದ ಮಹಿಳಾ ಸಮುದಾಯವನ್ನು ಕಾಲಗತಿಯಲ್ಲಿ ತುಲನೆ ಮಾಡುವುದು.
- ಧರ್ಮ ಮತ್ತು ಮಹಿಳೆಯರಿಗಿರುವ ಸಾಂಪ್ರದಾಯಿಕ

ಸಂಬಂಧಗಳನ್ನು ಅರಿಯುವುದು.

- ಜಾತಿ ಬಾಹಿರವಾಗಿಯೂ ಶೋಷಣೆಗೆ ಒಳಗಾದ ಮಹಿಳೆಯನ್ನು ದ್ವಿತೀಯ ದರ್ಜೆಯ ವ್ಯಕ್ತಿಯನ್ನಾಗಿಸಿದ ಪುರುಷ ಪ್ರಾಧಾನ್ಯತೆಯನ್ನು ಅವಲೋಕಿಸುವುದು.
- ಧಾರ್ಮಿಕ ಸ್ವಾತಂತ್ರ್ಯದಿಂದ ಮಹಿಳಾ ಸಬಲೀಕರಣ ಸಾಧ್ಯವೇ? ಎಂಬುದನ್ನು ಚರ್ಚಿಸುವುದು
- ಮಹಿಳಾ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವಲ್ಲಿ ಧರ್ಮವು ವಹಿಸಿದ ಪಾತ್ರವನ್ನು ತಿಳಿಯುವುದು.
- ಮುಸ್ಲಿಂ ಧರ್ಮದಲ್ಲಿ ಮಹಿಳೆಯ ಸ್ಥಾನಮಾನವನ್ನು ಅವಲೋಕಿಸುವುದು, ಇತ್ಯಾದಿ.

ಈ ಅಂಶವನ್ನು ಅವಲೋಕಿಸುವ ಸಲುವಾಗಿ ಮಂಡ್ಯ ಜಿಲ್ಲೆ,. ನಾಗಮಂಗಲ ತಾಲ್ಲೂಕಿನ ಆಯ್ದ ಸಮುದಾಯಗಳಲ್ಲಿ ಕ್ಷೇತ್ರಧ್ಯಾಯನ ನಡೆಸಲಾಗಿದ್ದು ಇಂದಿಗೂ ಮಹಿಳಾ ಸಬಲೀಕರಣಕ್ಕೆ ಧಾರ್ಮಿಕ ಅಂಶಗಳು ಹೇಗೆ ಅಡ್ಡಿಯಾಗಿವೆ ಎಂಬ ವಿಷಯವನ್ನು ಅವಲೋಕಿಸಿ ಮಾಹಿತಿ ಸಂಗ್ರಹಿಸಲಾಗಿದೆ,

**ವ್ಯಾಪ್ತಿ**

ಮಂಡ್ಯ ಜಿಲ್ಲೆಯ ಉತ್ತರ ಭಾಗದಲ್ಲಿರುವ ನಾಗಮಂಗಲ ತಾಲ್ಲೂಕು, ಸಾಹಿತ್ಯ, ಜನಪದ, ಶಿಕ್ಷಣ, ಆಧ್ಯಾತ್ಮಿಕ ಹಾಗೂ ರಾಜಕೀಯವಾಗಿ ರಾಷ್ಟ್ರದಲ್ಲಿಯೇ ವಿಶೇಷ ಸ್ಥಾನಮಾನ ಗಳಿಸಿದ ಪ್ರದೇಶವಾಗಿದೆ. ತಾಲ್ಲೂಕಿನ ಒಟ್ಟು ಜನ ಸಂಖ್ಯೆ 1,85,706, ಇಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ ಹಾಗೂ ಬುಡಕಟ್ಟು ಜನಾಂಗದವರು ವಾಸಿಸುತ್ತಿದ್ದು, ವಿಶೇಷವಾಗಿ ಮುಸ್ಲಿಂರು 2ನೇ ಅತಿ ದೊಡ್ಡ ಧಾರ್ಮಿಕ ಸಮುದಾಯವಾಗಿದ್ದಾರೆ. ತಾಲ್ಲೂಕಿನ ಕೇಂದ್ರಸ್ಥಾನವಾದ ನಾಗಮಂಗಲದಲ್ಲಿಯೇ ಶೇ.80ರಷ್ಟು ಮುಸ್ಲಿಮರು ವಾಸವಾಗಿದ್ದು (ಒಟ್ಟು ಮುಸ್ಲಿಮರ ಸಂಖ್ಯೆ 5100) ಇವರಲ್ಲಿ 1885 (ಶೇ. 46.2) ಮಹಿಳೆಯರಿದ್ದಾರೆ. ಬೆಳ್ಳೂರು ಗ್ರಾಮದಲ್ಲಿ ಶೇ. 18 ಅಂದರೆ 918 ಜನ ಮುಸ್ಲಿಂ ರಿದ್ದು, ಇವರಲ್ಲಿ 398 (ಶೇ. 43.35) ಜನ ಮಹಿಳೆಯರಿದ್ದಾರೆ. ಇವರೆಲ್ಲರೂ ಅಧ್ಯಯನ ವ್ಯಾಪ್ತಿಗೆ ಒಳಪಡುತ್ತಾರೆ. ಕ್ರೈಸ್ತರು ತಾಲ್ಲೂಕಿನ ಕೇಂದ್ರಸ್ಥಳದಲ್ಲಿದ್ದು ಇವರ ಸಂಖ್ಯೆ ಕೇವಲ 350 ಜನರಿದ್ದು, 168 ಜನ ಮಹಿಳೆಯರಿದ್ದಾರೆ. ಇವರು ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತಾರೆ. ನಾಗಮಂಗಲದಿಂದ 7 ಕಿ.ಮೀ ದೂರದಲ್ಲಿ ಶಿಳ್ಳೆಕ್ಯಾತ ಎಂಬ ಬುಡಕಟ್ಟು ಜನಾಂಗವಿರುವ ಶಿಕಾರಿಪುರವಿದೆ ಅಲ್ಲಿ ಒಟ್ಟು 256 ಜನರಿದ್ದಾರೆ 129 ಜನ ಮಹಿಳೆಯರಿದ್ದು,ವಿಶೇಷ ಧಾರ್ಮಿಕ ಅಂಶಗಳನ್ನೊಂದಿರುವುದರಿಂದ ಇವರನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ,. ಉಳಿದಂತೆ ಹಿಂದುಗಳು ಬಹು ಸಂಖ್ಯಾತರಾಗಿದ್ದು, 1.80 ಲಕ್ಷ ಜನರಿದ್ದು, ಇವರಲ್ಲಿ 88320 (ಶೇ. 49.06) ಮಹಿಳೆಯರಿದ್ದಾರೆ ಇವರನ್ನೂ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಹಾಗೂ ಇತರೆ ಸಂಘ–ಸಂಸ್ಥೆಗಳು, ಸರ್ಕಾರಿ ಕಛೇರಿಗಳು, ದೇವಾಲಯಗಳು, ಮಸೀದಿಗಳು ಅಧ್ಯಯನದ ವ್ಯಾಪ್ತಿಗೊಳಪಡುತ್ತವೆ.

**ಅಧ್ಯಯನ ವಿಧಾನ**

ಸರಳ ಯಾದೃಚ್ಚಿಕ ಮಾದರಿಯ ಮೂಲಕ ಮಹಿಳೆಯರನ್ನು ಆಯ್ಕೆ ಮಾಡಲಾಯಿತು. ಒಟ್ಟು ಮಹಿಳೆಯರಲ್ಲಿ (90771) ಶೇ. 10 ರಷ್ಟು ಮಹಿಳೆಯರನ್ನು ಅವರ ಸಂಖ್ಯೆಗನುಗುಣವಾಗಿ ಆರಿಸಿಕೊಂಡು ಕ್ಷೇತ್ರಧ್ಯಾಯನದ ಮೂಲಕ ಅಂದರೆ ಸಂದರ್ಶನ, ಪ್ರಶ್ನಾವಳಿ, ಅವಲೋಕನದಂತಹ ಪ್ರಾಥಮಿಕ ಮೂಲ ಹಾಗೂ ಕೆಲವು ದಾಖಲೆಗಳಿಂದ ಮಾಹಿತಿ ಸಂಗ್ರಹಿಸಲಾಯಿತು ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಿ ವರದಿ ಸಿದ್ಧಪಡಿಸಲಾಗಿದೆ.

**ಮಹಿಳಾ ಸಬಲೀಕರಣ ಮತ್ತು ಧರ್ಮ**

ಮಹಿಳಾ ಸಬಲೀಕರಣಕ್ಕೆ ಅಡ್ಡಿಯಾಗಿರುವ ಧಾರ್ಮಿಕ ಅಂಶಗಳಲ್ಲಿ ಮುಖ್ಯವಾಗಿ ಜಾತಿ ನಿಯಮಗಳು, ಧರ್ಮ ಸಂಹಿತೆಗಳು, ಪುರುಷ ಪ್ರಾಧಾನ್ಯತೆ, ಸಂಪ್ರದಾಯ ಶರಣತೆ, ಮೂಢನಂಬಿಕೆಗಳು, ಮಹಿಳೆಯರ ಅಸಹಾಯಕತೆ ಮತ್ತು ಅನಿವಾರ್ಯತೆ ಹಾಗೂ ಇತ್ಯಾದಿ ಅಂಶಗಳನ್ನು ಪ್ರಮುಖವಾಗಿ ಗುರ್ತಿಸಲಾಗಿದೆ.

**ಜಾತಿ ನಿಯಮಗಳು**

ಪ್ರಪಂಚದ ಯಾವುದೇ ಧಾರ್ಮಿಕ ಸಮುದಾಯದಲ್ಲಿ ಕಂಡು ಬರದ ಈ ಜಾತಿ ಪದ್ಧತಿಯು ಹಿಂದೂ ಧರ್ಮದ ಜೊತೆ ಥಳಕುಹಾಕಿಕೊಂಡಿದೆ. ಈ ಸಮಾಜವನ್ನು ಸಾವಿರಾರು ಸ್ಥರಗಳಲ್ಲಿ ವಿಭಜಿಸಿರುವ ಜಾತಿ ಪದ್ಧತಿಯ ಕಠಿಣ ನಿಯಮಗಳು ಸಂವಿಧಾನದ ಕಾನೂನುಗಳಿಗಿಂತಲೂ ತೀಕ್ಷಣವಾಗಿದೆ. ಇಡೀ ಭರತ ಖಂಡದ ಅಭಿವೃದ್ಧಿಯನ್ನೆ ನುಂಗಿ ಹಾಕಿರುವ ಈ ಅನಿಷ್ಠ ಪದ್ದತಿ ಮಹಿಳೆಯರ ಸ್ವಾತಂತ್ರ್ಯಹರಣದಲ್ಲಿ, ಅಭಿವೃದ್ಧಿ ವಂಚನೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಚಿಂತನೆಗಳು ನಡೆಯುತ್ತಿರುವಾಗ ಭಾರತದಲ್ಲಿ ಮಹಿಳೆ ಜಾತಿಯ ಸುಳಿಯಲ್ಲಿಯೇ ಇದ್ದು ಆಕೆಯ ಧಾರ್ಮಿಕ ಸ್ವಾತ್ರಂತ್ರ್ಯಕ್ಕೆ ಧಕ್ಕೆ ಉಂಟಾಗಿದೆ. ನಾಗಮಂಗಲ ತಾಲ್ಲುಕಿನಲ್ಲಿ ಅಧ್ಯಯನಕ್ಕೆಂದು ಆಯ್ದುಕೊಂಡ ಕೆಲವೇ ಹಳ್ಳಿಗಳಲ್ಲಿ (ಹೆಚ್ಚಿನ ಜಾತಿಗಳಿರುವ ಸಮುದಾಯ) ಹಾಗೂ ನಾಗಮಂಗಲ ಪಟ್ಟಣದಲ್ಲಿ ಅವಲೋಕಿಸಿದಂತೆ ಬ್ರಾಹ್ಮಣ, ಲಿಂಗಾಯಿತ, ಕುರುಬ, ಒಕ್ಕಲಿಗ, ಮಡಿವಾಳ, ಕುಂಬಾರ, ವಿಶ್ವಕರ್ಮ, ಬಲಿಜ, ಗಾಣಿಗ, ಚಮ್ಮಾರ, ಕೊರವ, ಬಣಜಿಗ, ಪರಿಶಿಷ್ಟರು,. ಮಾರವಾಡಿಗಳು, ಬುಡಕಟ್ಟು ಜನಾಂಗ, ಗಂಗಾಮತಸ್ಥ, ಇವೇ ಮೊದಲಾದ ಈ ಭಾಗದ ಪ್ರಮುಖ ಜಾತಿಗಳು ಕಂಡುಬರುತ್ತವೆ. ಇಲ್ಲಿ ಪ್ರಮುಖವಾಗಿ ಬ್ರಾಹ್ಮಣರ ಸಂಖ್ಯೆಯು ಗಣನೀಯವಾಗಿದೆ ಇವರಲ್ಲಿ ಇಂದಿಗೂ ವಿಧವಾ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಇದೊಂದು ಅಮಾನವೀಯ ಪದ್ಧತಿ, ನಾಗಮಂಗಲ ಪಟ್ಟಣದ ನರಸಿಂಹಮೂರ್ತಿಸ್ವಾಮಿಯವರ ಪುತ್ರಿ ವಿವಾಹವಾದ 8ನೇ ದಿನಕ್ಕೆ ವಿಧವೆಯಾಗಿದ್ದು ಇಂದಿಗೆ ಸುಮಾರು 9 ವರ್ಷಗಳು ಕಳೆದಿವೆ. ಆಕೆಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಅಂದಿನಿಂದ ಇಂದಿನವರೆವಿಗೂ ತೆಲೆಗೂದಲು ಬೆಳೆಸಲು ಬಿಟ್ಟಿಲ್ಲ. ಸೌಂದರ್ಯವಿದ್ದರೂ ಶೃಂಗರಿಸಿಕೊಳ್ಳುವಂತಿಲ್ಲ. ಶುಭಕಾರ್ಯಗಳಿಗೆ ಹೋಗುವಂತಿಲ್ಲ. ಮನೆಯಲ್ಲಿ ನಡೆಯುವ ಮಂಗಳ ಕಾರ್ಯದಲ್ಲಿ ಭಾಗವಹಿಸುವಂತಿಲ್ಲ. ಒಟ್ಟಾರೆ ಆಕೆ ಸಾಯುವವರೆಗೂ ಗೃಹಬಂಧನದಲ್ಲಿರಬೇಕು ಎಂಬುದು ಆಕೆಯ ತಂದೆಯ ಅಭಿಪ್ರಾಯ. ಬ್ರಾಹ್ಮಣ ಧರ್ಮ ನಮ್ಮ ಜಾತಿ ನಿಯಮ. ಬೇರೆ ಬ್ರಾಹ್ಮಣ ಕುಟುಂಬದಲ್ಲಿಯೂ ಅಂದರೆ ಸುಮಾರು 82 ಕುಟುಂಬಗಳಲ್ಲಿ ಎಲ್ಲಾ ವಯಸ್ಸಿನ 21 ವಿಧವೆಯರಿದ್ದು ಅವರ ಸಬಲೀಕರಣವಿರಲಿ ಸ್ವಾತಂತ್ರ್ಯವಿಲ್ಲದಿರುವುದು ಹಾಗೂ ಅವರ ಬಗ್ಗೆ ಸಮುದಾಯ ಹೊಂದಿರುವ ಕೀಳರಿಮೆಯನ್ನೂ ಕ್ಷೇತ್ರಾಧ್ಯಯನದಲ್ಲಿ ಅವಲೋಕಿಸಲಾಯಿತು. ಹಾಗೇ ಮುಂದುವರಿದು ಪಟ್ಟಣ ಹಾಗೂ ಹಳ್ಳಿಗಳಾದ ಚೀಣ್ಯ, ಹುಲಿಕೆರೆ, ಆಚಾರಿಪುರ, ತಟ್ಟಹಳ್ಳಿ, ಬೆಳ್ಳೂರು, ದೇವಲಾಪುರ, ಈ ಗ್ರಾಮದಲ್ಲಿ ವಾಸಿಸುತ್ತಿರುವ ವಿಶ್ವಕರ್ಮ, ಬಣಜಿಗರು, ವಿಧವಾ ಪದ್ದತಿಯನ್ನು ಬಹಳ ಕಠಿಣವಾಗಿ

ಅನುಸರಿಸುತ್ತಿದ್ದಾರೆ,. ವಿಧವಾ ವಿವಾಹಕ್ಕೆ ಆ ಜಾತಿ ಮತ್ತು ಧರ್ಮದ ಅಂಶಗಳು ಕಾರಣವೆನ್ನುತ್ತಾರೆ. ಪುರೋಹಿತ ರಾಮಾಚಾರಿ, ಬಣಜಿಗರು ಇದೇ ಕಾರಣ ನೀಡುತ್ತಾರೆ. ಬ್ರಾಹ್ಮಣರು ಮೊದಲಿನಿಂದಲೂ ಶ್ರೇಷ್ಠತೆಯನ್ನು ಕಯ್ದುಕೊಂಡಿದ್ದರೂ ಮಹಿಳೆಗೆ 2ನೇ ಸ್ಥಾನವನ್ನೇ ನಿಡಿದ್ದಾರೆ. ಜಾತಿಯ ಚೌಕಟ್ಟಿನಲ್ಲಿ ಬರುವ ಧಾರ್ಮಿಕ ಅಂಶಗಳಿಂದ ಮಹಿಳೆಯರನ್ನು ಬಂಧಿಸಿಡಲಾಗಿದೆ. ಬ್ರಾಹ್ಮಣ ಜಾತಿಯನ್ನು ಹೊರತುಪಡಿಸಿ ಉಳಿದ ಜಾತಿಗಳಲ್ಲಿ ಮಹಿಳೆಯನ್ನು ತಮ್ಮ ಕಸುಬುಗಳಲ್ಲಿ ದುಡಿಸಿಕೊಳ್ಳುತ್ತಿದ್ದಾರೆ. ಕಬ್ಬಿಣ ಬಡಿಯುವುದು, ಮಣ್ಣು ತರುವುದು, ಗಾಣ ಅರೆಯುವುದು, ಮಡಿಕೆ ಮಾರುವುದು, ನೇಗಿಲು ಎಳೆಯುವುದು, ಹೀಗೆ ತಮ್ಮ ಜಾತಿ ಕಸುಬಿನಲ್ಲಿ ಮಹಿಳೆಯರದ್ದೇ ಹೆಚ್ಚಿನ ದುಡಿಮೆ. ಆದರೂ ಇದು ಆಕೆಯ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿದೆ. ಆಕೆ ಉನ್ನತ ಶಿಕ್ಷಣ ಪಡೆಯಲಾಗಲಿ, ಆಧುನಿಕ ಉದ್ಯೋಗ ಕೈಗೊಳ್ಳಲಾಗಲೀ, ಸದೃಡಜೀವನ ಸಾಗಿಸಲಾಗಲೀ ಸಾಧ್ಯವಾಗದೆ, ಪುರುಷ ಶ್ರೇಯಸ್ಸಿಗೆ ದುಡಿಯುತ್ತಿದ್ದಾಳೆ, ಪುರುಷ ಧರ್ಮಕ್ಕೆ ಅಧೀನಳಾಗಿದ್ದಾಳೆ.

## ಧರ್ಮ ಸಂಹಿತೆಗಳು

ಪ್ರತಿಯೊಂದು ಧರ್ಮವು ತನ್ನದೇ ಆದ ಸ್ವ–ಸಂವಿಧಾನವನ್ನು ಹೊಂದಿರುತ್ತದೆ. ಹಿಂದೂ ಧರ್ಮದ ಪ್ರವರ್ತಕರಾದ ಮನು, ಯಜ್ಞವಲ್ಕ್ಯ, ಕೌಟಿಲ್ಯ, ಶಿಶಿರಾ ಹಾಗೂ ಧರ್ಮಸಂಹಿತೆಗಳಾದ, ಮಹಾಭಾರತ, ರಾಮಾಯಣ, ದರ್ಶನಗಳು, ಆಗಮಗಳು, ವೇದೋಪನಿಷತ್ತುಗಳು, ಹಾಗೂ ಧರ್ಮಶಾಸ್ತ್ರಗಳು ಪುರುಷರಿಂದಲೇ ರಚಿತಗೊಂಡಿದ್ದು, ಮಹಿಳೆಯರನ್ನು ಪಾವಿತ್ರ್ಯತೆಯಿಂದ ದೂರವಿಟ್ಟಿದ್ದಾರೆ. ಮಹಿಳೆಯನ್ನು ಅವಮಾನಿಸಿದ್ದಾರೆ. ದ್ರೌಪದಿಯನ್ನು ಪಣಕ್ಕಿಟ್ಟಿದ್ದು ಗರ್ಭಿಣಿ ಸೀತೆಯನ್ನು ಕಾಡಿಗೆ ಕಳುಹಿಸಿದ್ದು, ಗಾಂಧಾರಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿದ್ದು, ಪತಿ ಧರ್ಮದ ಪಾಲನೆಯಾಗಿದೆ. ಬಾಲ್ಯವಿವಾಹ, ಸತಿಪದ್ಧತಿ, ಜೋಹರ್ ಪದ್ಧತಿ ಇವೆಲ್ಲಾ ಪುರುಷರು ಮಹಿಳೆಯರನ್ನೇ ಗುರಿಯನ್ನಾಗಿಸಿದ್ದಾರೆ. ಇತರೆ ಧರ್ಮಗಳಲ್ಲಿ ವಿಧವಾ ವಿವಾಹ ಮುಕ್ತವಾಗಿದೆ. ಮುಸ್ಲಿಂರು ವಾಸಿಸುತ್ತಿರುವ ನಾಗಮಂಗಲ ಪಟ್ಟಣ ಹಾಗೂ ಬೆಳ್ಳೂರು ಗ್ರಾಮದಲ್ಲಿ ಮಾಹಿತಿ ಸಂಗ್ರಹಿಸುವಾಗ ದೊರೆತ ಮಾಹಿತಿಯಂತೆ ಅವರಲ್ಲಿ ಮುಸ್ಲಿಂ ಮಹಿಳೆಯನ್ನು ಶೂದ್ರರಂತೆ ನೋಡುತ್ತಾರೆ. ಗಂಡನ ಆಯ್ಕೆಯಲ್ಲಿ ಸ್ವಾತಂತ್ರ್ಯವಿಲ್ಲ, ಬುರ್ಕಾಧರಿಸದೇ ಹೊರಗೆ ಬರುವಂತಿಲ್ಲ. ವಿದ್ಯಾರ್ಥಿನಿಯರೂ ಬುರ್ಕಾ ಧರಿಸಿಯೇ ಶಾಲಾ–ಕಾಲೇಜಿಗೆ ಹೋಗಬೇಕು. ಕೆಲವು ವಿದ್ಯಾರ್ಥಿಗಳಿಗೆ ಇದು ಇಷ್ಟವಿಲ್ಲ. ಸೇಂಟ್ ಅಲೋಸಿಸ್ ಕಾಲೇಜಿನ ಮುಸ್ಲಿಂ ವಿದ್ಯಾರ್ಥಿನಿಗೆ ಬುರ್ಕಾಧರಿಸದಂತೆ ಆದೇಶ ನೀಡಿದ್ದು ಆಕೆಯ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾದರೆ ಬುರ್ಕಾ ಧರಿಸಲೇಬೇಕಾದದ್ದು ಅವರ ಕುಟುಂಬದ, ಧರ್ಮಗುರುಗಳ, ಮುಖಂಡರ ಒತ್ತಡವಾಗಿದೆ. ಮುಸ್ಲಿಂ ಮಹಿಳೆ ಕಣ್ಣುಗಳನ್ನು ಬಿಟ್ಟು ಬೇರೆ ಏನನ್ನು ಪ್ರದರ್ಶಿಸಬಾರದು ಎಂಬ ಸಂಹಿತೆ, ನಾಗಮಂಗಲದಂತಹ ಗ್ರಾಮೀಣ ಭಾಗದಲ್ಲಿ ಜೀವಂತವಾಗಿದೆಯೆಂದರೆ ಧರ್ಮದ ನೀತಿ ಸಂಹಿತೆಗಳು ಕಾನೂನಿಗಿಂತ ಬಿಗಿಯಾಗಿವೆ. ವಿಶ್ವ ಟೆನಿಸ್ ತಾರೆ ಸಾನಿಯ ಮಿರ್ಜಾಳಿಗೆ ಫತ್ವಾ ಹೊರಡಿಸುವ ಭಯ ಹುಟ್ಟಿಸಲಾಗಿತ್ತು. ಮುಸ್ಲಿಂ ಮಹಿಳೆ ಬೇರೆ ಧರ್ಮದ ಮಹಿಳೆಯರ ಜೊತೆ ಸಂಪರ್ಕ ಸಾಧಿಸುವುದನ್ನು ಪುರುಷರು ಸಹಿಸುವುದಿಲ್ಲ. ಇದರಿಂದಾಗಿ ವಿಚಾರ ವಿನಿಯಮವಾಗುವುದಿಲ್ಲ. ಸಂಘ ಸಂಸ್ಥೆಗಳಲ್ಲಿ(ಖಉಙಉಊ) ಸದಸ್ಯರಾಗುವಂತಿಲ್ಲ. ವೈಯಕ್ತಿಕ ವ್ಯವಹಾರಗಳಲ್ಲಿ ತೊಡಕಾಗುವಂತಿಲ್ಲ, ಶೃಂಗರಿಸಿಕೊಂಡು ಸಾರ್ವಜನಿಕರವಾಗಿ ಕಾಣಿಸಿಕೊಳ್ಳುವಂತಿಲ್ಲ, ಇವುಗಳ ಜೊತೆಗೆ ಮಸೀದಿ, ದೇವಾಲಯ ಮತ್ತು ಚರ್ಚ್‌ಗಳಿಗೆ ಮುಸ್ಲಿಂ ಮಹಿಳೆಯರು ಪ್ರವೇಶಿಸದಂತಹ ನಿಷೇಧ ಇದ್ದು, ಧಾರ್ಮಿಕ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಲಾಗಿದೆ. ಧರ್ಮದ ಕಾರಣಕ್ಕಾಗಿಯೇ ಉನ್ನತ ಶಿಕ್ಷಣ ಪಡೆಯುವಂತಿಲ್ಲ. ಇದರಿಂದಾಗಿ ಇತರೆ ಮಹಿಳೆಯರಿಗೆ ಹೋಲಿಸಿದರೆ ಮುಸ್ಲಿಂ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಹಿಂದುಳಿದಿರುವುದನ್ನು ನಾಗಮಂಗಲದಲ್ಲಿ ಗುರ್ತಿಸಲಾಗಿದೆ.

## ಪುರುಷ ಪ್ರಾಧಾನ್ಯತೆ ಹಾಗೂ ಲಿಂಗ ತಾರತಮ್ಯ

ಎಲ್ಲಾ ಧರ್ಮ, ಸಮುದಾಯ ಮತ್ತು ಎಲ್ಲಾ ಕಾಲಗಳಲ್ಲಿಯೂ ಪುರುಷ ಪ್ರಧಾನ್ಯತೆಯನ್ನೆ ನಾವು ಗುರ್ತಿಸಬಹುದು. ಹಾಗೆಯೇ ಅಧ್ಯಯನಕ್ಕೆ ಆಯ್ದುಕೊಂಡಿರುವ ಕ್ಷೇತ್ರದಲ್ಲಿಯೂ ಅವಲೋಕಿಸಲಾಗಿದೆ. ಪಿತೃಪ್ರಧಾನ ಅವಿಭಕ್ತ ಕುಟುಂಬಗಳೇ ಅಧಿಕವಾಗಿರುವ ಈ ತಾಲ್ಲೂಕಿನಲ್ಲಿ ಮಗುವಿನ ಜನನದಿಂದ ಪ್ರಾರಂಭವಾಗಿ ಶವಸಂಸ್ಕಾರದವರೆಗೂ ಸಂಭವಿಸುವ ಧಾರ್ಮಿಕ ಅಂಶಗಳನ್ನು ನಿರ್ಧರಿಸುವರೇ ಪುರುಷರು. ಮಕ್ಕಳಿಗೆ ನಾಮಕರಣ ಮಾಡುವ ವಿಧಿಯಲ್ಲಿ ತಂದೆಯದೇ ಅಂತಿಮ ನಿರ್ಧಾರ, ಶಿಕಾರಿಪುರದಲ್ಲಿರುವ ಸಿಳ್ಳೆ ಕ್ಯಾತ ಜನಾಂಗದವರಲ್ಲಿ ವಿಶಿಷ್ಟ ಆಚರಣೆ ಜಾರಿಯಲ್ಲಿದ್ದು ವರ್ಷಕ್ಕೊಮ್ಮೆ ಆಚರಿಸುವ ಅಡವಿಯಮ್ಮನ ಹಬ್ಬದಲ್ಲಿ ಪೂಜೆ ವೇಳೆ ಮಹಿಳೆಯರು ಇರುವಂತಿಲ್ಲ. ಯಾವುದೇ ದೇವಾಲಯಗಳಲ್ಲಿ ಮಹಿಳಾ ಅರ್ಚಕರಿಲ್ಲ, ಮಹಿಳೆಯರು ಗರ್ಭಗುಡಿ ಪ್ರವೇಶಿಸುವಂತಿಲ್ಲ. ದೇವಾಲಯದ ಆವರಣ ಸ್ವಚ್ಛಗೊಳಿಸುವುದಕ್ಕೆ ಸೀಮಿತ, ಮಹಿಳಾ ಪೌರೋಹಿತ್ಯವನ್ನು ವ್ಯವಸ್ಥಿತವಾಗಿಯೇ ನಿಷೇಧಿಸಲಾಗಿದೆ. ವಿವಾಹ ಒಪ್ಪಂದದ ಮಾತಿನ ಸಂದರ್ಭದಲ್ಲಿ ತಂದೆಯಿಲ್ಲದಿದ್ದರೆ ವಧು–ವರರ ಚಿಕ್ಕಪ್ಪ, ದೊಡ್ಡಪ್ಪ ಅಥವಾ ಇತರೆ ಪುರುಷರು 'ಒಪ್ಪಿಗೆ' ಪಡೆಯುತ್ತಾರೆಯೇ ಹೊರತು ತಾಯಿಯಿಂದ ಪಡೆದುಕೊಳ್ಳುವುದಿಲ್ಲ. ಜೋಗಿಗೌಡ (ಕೋಟೆಬೆಟ್ಟ) ಎಂಬುವವರ ಮನೆಯಲ್ಲಿ ಮನೆದೇವರ ವಿಗ್ರಹವನ್ನು ಯಾವುದೇ ಮಹಿಳೆ ಮುಟ್ಟುವಂತಿಲ್ಲ. ಗ್ರಾಮಗಳಲ್ಲಿ ನಡೆಯುವ ಹಬ್ಬ, ಜಾತ್ರೆ, ಉತ್ಸವಗಳನ್ನು ನಿರ್ಧರಿಸುವಾಗ ಬುದ್ಧಿವಂತ ಮಹಿಳೆಯರ ಸಲಹೆಗಳಿಗೂ ಅವಕಾಶ ನೀಡಲಾಗುತ್ತಿಲ್ಲ. ಆದರೆ ಪುರುಷ ಅಭ್ಯುದಯಕ್ಕಾಗಿ ಮಹಿಳೆಯನ್ನು ಹರಕೆ ಹೊರುವುದು, ಕೇಶಮುಂಡನ ಮಾಡಿಸುವುದು ಕಂಡು ಬರುತ್ತದೆ. ಆಕೆಯನ್ನು ಮುಖ್ಯವಾಹಿನಿಗೆ ತರದಿದ್ದರೆ ಆಕೆಯ ಸಬಲೀಕರಣ ಹೇಗೆ ಸಾಧ್ಯ? ಅಹಲ್ಯಯ ಪಾಪ ವಿಮೋಚನೆಗೆ ಶ್ರೀರಾಮ ಎಂಬ ಪುರುಷನೇ ಬೇಕಾಯಿತೇ, ಶ್ರೀರಾಮನ ಪೌರುಷವನ್ನು, ಆದರ್ಶವನ್ನು ನಿರ್ಧರಿಸಲು ಸೀತೆಯೇ ಬೇಕಾಯಿತೆ? ಹೌದು ಇಂತಹ ಆದರ್ಶಗಳನ್ನು ಪುರುಷರ ಮುಂದುವರಿಸಿಕೊಂಡು ಬಂದಿದ್ದರಿಂದಲೇ ಇಂದಿಗೂ ಮಹಿಳೆ ಶೋಷಣೆಗೆ ಒಳಗಾಗಿದ್ದಾಳೆ. ಶಬರಿಮಲೆಗೆ ಮಹಿಳೆಯರು ಹೋಗಬೇಕೆನ್ನುವ ಇಂಗಿತ ವ್ಯಕ್ತಪಡಿಸುತ್ತಾರೆ. ಆದರೆ ಅವರಿಗೆ ನಿರ್ಬಂಧಿತ ಅವಕಾಶವಿರುವುದರಿಂದ ಅತೃಪ್ತರಾಗಿದ್ದಾರೆ. ಮಸೀದಿಗೆ ಹೋಗಲು ಅವಕಾಶ ನೀಡದೆ ಮುಸ್ಲಿಂರು ಪುರುಷ ಪ್ರಾಧಾನ್ಯತೆಯನ್ನು ಮೆರೆದಿದ್ದಾರೆ, ಪುರುಷರು ಯಾವ ಶೈಲಿಯ ಉಡುಪನ್ನು ಬೇಕಾದರೂ ಧರಿಸಬಹುದು. ಕ್ರೈಸ್ತರಲ್ಲಿ ಇಂತಹ ಕಠಿಣ ನಿರ್ಬಂಧಗಳೇನು ಕಂಡುಬರುವುದಿಲ್ಲ. ಆದರೂ ಕ್ರಿಶ್ಚಿಯನ್‌ರಿಗೆ ಮಹಿಳೆ ಬಗ್ಗೆ ಅಂತಹ ಗೌರವವಿಲ್ಲ. ಜಗತ್ತಿನ ಮೊದಲ

ತಾಯಿ'ಈವ್'ಳನ್ನೆ ಪಾಪಿ ಎಂದು ಆ ಧರ್ಮಗುರುಗಳು ಜರಿದಿದ್ದಾರೆ. ಮುಸ್ಲಿಂರಲ್ಲಿರುವ ಷರಿಯತ್ ಸಂಹಿತೆ ತಲಾಕ್‌ಗೆ ಅವಕಾಶ ನೀಡಿದ್ದು, ಸಕಾರಣವಿಲ್ಲದಿದ್ದರೂ ವಿಚ್ಛೇದನ ನೀಡಿ, ಏಕಕಾಲಕ್ಕೆ 4 ಜನ ಪತ್ನಿಯರನ್ನು ಹೊಂದುವ ಪುರುಷ ಪ್ರಧಾನ ಪರಾಕಾಷ್ಠತೆ ಮಹಿಳೆಯರ ಸಂಬಲೀಕರಣಕ್ಕೆ ಇಂದಿಗೂ ಅಡ್ಡಿಯಾಗಿರುವ ಹಲವು ಅಂಶಗಳಲ್ಲಿ ಒಂದಾಗಿದೆ.

**ಸಂಪ್ರದಾಯ ಶರಣತೆ**

ವೇದಗಳ ಕಾಲದಿಂದಲೂ ಕೆಲವು ಆಚರಣೆಗಳು ಹಾಗೇಯೇ ಮುಂದುವರಿದಿವೆ. ಕೆಲವು ಬದಲಾವಣೆಗಳೊಂದಿಗೆ ಬೇರೆ ಸ್ವರೂಪ ಪಡೆದಿದ್ದರೂ ಮೂಲ ಉದ್ದೇಶ ಹಾಗೆಯೇ ಉಳಿದಿವೆ. 10 ಹಳ್ಳಿಗಳಲ್ಲಿ 50 ಜನ ವೃದ್ಧರನ್ನು ಸಂದರ್ಶಿಸಿದಾಗ ಅವರೆಲ್ಲರೂ ಸಂಪ್ರದಾಯಕ್ಕೆ ಜೋತು ಬಿದ್ದಿರುವುದು ಕಂಡು ಬಂತು ಹಾಗೂ ಯುವಕರನ್ನು ಸಂಪರ್ಕಿಸಿದಾಗ ಅವರಲ್ಲಿ ಇನ್ನು ಕೆಲವರು ಸಂಪ್ರದಾಯವನ್ನು ಮುರಿಯಲು ಸಿದ್ಧರಿಲ್ಲ. ವೃದ್ಧ ಮಹಿಳೆಯರ ಪ್ರಕಾರ ಜಾತಿ, ಕುಟುಂಬ, ಮನೆತನ, ಊರಿನ ಸಂಪ್ರದಾಯ ಮುರಿದು ಹೆಣ್ಣು ಮಕ್ಕಳಿಗೆ ಅತಿಯಾದ ಸ್ವಾತಂತ್ರ್ಯ ನೀಡಲು ಸಾಧ್ಯವಿಲ್ಲ. ಹೆಣ್ಣು ಮಡಿಕೆ ಇದ್ದಂತೆ ಅದನ್ನು ಜೋಪಾನವಾಗಿ ಕಾಯ್ದುಕೊಳ್ಳಬೇಕು ಎನ್ನುತ್ತಾರೆ. ಸಬಲೀಕರಣದ ಬಗ್ಗೆ ಪ್ರಶ್ನಿಸಿದರೆ ಅದು ನಮಗಾಗಿ ಅಲ್ಲವೆಂಬಂತೆ ಉತ್ತರಿಸಿರುತ್ತಾರೆ. 'ಹೆಂಗಸು ಕುರಿ ಕಾಯುತ್ತಾಳಾ', 'ಗೌರಿಗೇಕೆ ಗದ್ದೆ ದುಃಖ', ಮುರ್ರ್ಕಾಸಿನ ಹೆಂಗಸು ಆರ್‍ಕಾಸಿನ ಯೋಚನೆ ಮಾಡಬಾರದು, ಹೀಗೆ ಅವರ ಬಾಯಲ್ಲಿ ಮಹಿಳಾ ವಿರೋಧಿ ಗಾದೆ, ನಾಣ್ಣುಡಿಗಳು, ಪುಂಖಾನುಪುಂಖವಾಗಿ ಉದುರುತ್ತವೆ. ಮೇಲೆ ವಿವರಿಸಿದ ಎಲ್ಲಾ ಅಂಶಗಳು ಸಹ ಸಂಪ್ರದಾಯ, ಸಂಸ್ಕಾರ, ಕುಲಗೌರವ, ವಂಶದ ಗೌರವ ಎಂಬ ಹೆಸರಿನಲ್ಲಿ ಸ್ವತಃ ಮಹಿಳೆಯೇ ಮಹಿಳೆಯ ಸಬಲೀಕರಣಕ್ಕೆ ಅಡ್ಡಿಯಾಗಿರುವುದು ವಿಪರ್ಯಾಸದ ಸಂಗತಿಯಾಗಿದೆ. ಮಹಿಳೆ ಇಲ್ಲಿ ಪುರುಷ ನಿರ್ಮಿತ ಮಹಿಳಾ ವಿರೋಧಿ ನಿಯಮಗಳನ್ನು ವಿರೋಧಿಸದಂತೆ ಸಂಪ್ರದಾಯ ಶರಣತೆ ಕಾರ್ಯೋನ್ಮುಖವಾಗಿರುತ್ತದೆ. ಮಹಿಳೆ ಜನಿಸಿರುವುದೇ ಪುರುಷರನ್ನು ತೃಪ್ತಿಪಡಿಸಲು, ಮಕ್ಕಳನ್ನು ಹಡೆಯಲು, ಸಾಕಲು, ದುಡಿಯಲು ಅಷ್ಟೇ, ಪುರುಷರಿಗೆ ಸರಿ ಸಮಾನರಾಗಿರುವಂತಿಲ್ಲ. 70 ವರ್ಷದ ಚೌಡಮ್ಮ ಆಕೆ ವಿವಾಹವಾದಾಗ ಗಂಡನ ಜೊತೆ ಮುಕ್ತವಾಗಿ 2 ವರ್ಷ ಮಾತನಾಡಿರಲಿಲ್ಲವಂತೆ ಇನ್ನು ಸಮಾನತೆಯೆಲ್ಲಿ?

**ಮಹಿಳಾ ಅಸಹಾಯಕತೆ ಮತ್ತು ಅನಿವಾರ್ಯತೆ**

ಮಹಿಳಾ ಸಬಲೀಕರಣಕ್ಕೆ ಇಂದಿಗೂ ಅಡ್ಡಿಯಾಗಿರುವ ಅನೇಕ ಅಂಶಗಳಲ್ಲಿ ಬೇರೆ ಬೇರೆ ಹಿತಾಸಕ್ತಿಗಳ ಕೈವಾಡವನ್ನು ಅವಲೋಕಿಸಲಾಗಿದೆ. ವೇದಗಳ ಕಾಲದಿಂದ ಇಲ್ಲಿಯವರೆಗೆ ಈ ಎಲ್ಲಾ ಅಂಶಗಳು ಪ್ರಮುಖವಾಗಿರುವಂತೆ ಅಂದಿನಿಂದ–ಇಂದಿನವರೆಗೂ ಸ್ವತಃ ಮಹಿಳೆಯೇ ಮಹಿಳೆಯ ಸಬಲೀಕರಣಕ್ಕೆ ಅಡ್ಡಿಯಾಗಿರುವ ಎಷ್ಟೋ ನಿದರ್ಶನಗಳು ಕಂಡುಬರುತ್ತವೆ. ಮೇಲೆ ಸಂಗ್ರಹಿಸಲಾದ ಅಂಶಗಳಾದ ಸಂಪ್ರದಾಯ, ಮೌಢ್ಯತೆ, ಕುಲಗೌರವ, ಸಂಸ್ಕಾರ, ಮನೆತನ, ಜಾತಿ, ಧರ್ಮದ ನೀತಿಯ ಹೆಸರಿನಲ್ಲಿ ಮಹಿಳೆಯಿಂದಲೇ ಮಹಿಳೆಯನ್ನು ನಿಯಂತ್ರಿಸಲಾಯಿತೇ ಅಥವಾ ಉಳಿವಿಗಾಗಿ ಮಹಿಳೆ ಒಲ್ಲದ ಮನಸ್ಸಿನಿಂದಲೇ ಮಹಿಳೆಯನ್ನು ಶೋಷಣೆಗೆ ಒಳಪಡಿಸಿದಳೇ? ಎಂಬುದನ್ನು ಗಮನಿಸಿದರೆ ಅಸಹಾಯಕತೆಯಿಂದ ಎಂದು ಪ್ರಾಕ್‌ಕಲ್ಪನೆ ಮಾಡಿಕೊಳ್ಳಬಹುದು, ಇದನ್ನು ಕ್ಷೇತ್ರಾಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿದೆ. ಆಧುನಿಕತೆಯ ತುತ್ತ ತುದಿಯಲ್ಲಿರುವ ಇಂದಿನ ಸಮಾಜದಲ್ಲಿಯೂ ಪುರುಷರ ವಿರುದ್ಧ, ಜಾತಿನಿಯಮದ ವಿರುದ್ಧ, ಮಹಿಳಾ ವಿರೋಧಿ ನಿಲುವುಗಳ ವಿರುದ್ಧ, ಮಹಿಳಾ ಸಂಬಂಧಿ ಧಾರ್ಮಿಕ ಸಮಸ್ಯೆಗಳ ವಿರುದ್ಧ, ಧ್ವನಿ ಎತ್ತಲು ಬಹುಸಂಖ್ಯಾತ ಮಹಿಳೆಯರಿಗೆ ಸಾಧ್ಯವಾಗದಿರುವುದು ಅವರ ಅಸಹಾಯಕತೆಯನ್ನು ಪ್ರತಿಬಿಂಬಿಸುತ್ತದೆ. ಸತಿ ಹೋಗದಿರುವ ಬಗ್ಗೆ, ದೇವದಾಸಿಯಾಗದಿರುವ ಬಗ್ಗೆ, ವಿಧವೆಯಾಗಿರದ ಬಗ್ಗೆ, ಬಾಲ್ಯವಿವಾಹ, ಹೆಣ್ಣು ಶಿಶುಹತ್ಯೆ, ಮಸೀದಿ, ಮದರಸಾಗಳಿಗೆ ಪ್ರವೇಶಿಸುವ ಬಗ್ಗೆ, ಪೌರೋಹಿತ್ಯ ನಡೆಸುವ, ಅರ್ಚಕರಾಗುವ, ಗುರ್ಭಗುಡಿಗೆ ಪ್ರವೇಶಿಸುವ, ಒಪ್ಪಿಗೆ ಪಡೆಯುವ, ಬುರ್ಕಾ ಧಿಕ್ಕರಿಸುವ ಬಹುಪತ್ನಿತ್ವವನ್ನು ವಿರೋಧಿಸುವ, ಮಿತ ಸಂತಾನ ಪಡೆಯುವ, ವಿಚ್ಛೇದನ ಪಡೆಯುವ ಬಗ್ಗೆ ಸ್ವತಃ ಮಹಿಳೆಯರಲ್ಲಿಯೇ ಗೊಂದಲಗಳಿದ್ದು, ಅದೇ ಅಂಶಗಳು ನಾಗಮಂಗಲದ ಮಹಿಳೆಯರಲ್ಲಿ ಕಂಡುಬಂದಿದೆ. ಪುರುಷರನ್ನು, ಇಡೀ ವ್ಯವಸ್ಥೆಯನ್ನು ಎದುರಿಸಿ, ಮನಪರಿವರ್ತಿಸುವ ಸ್ಥಿತಿಯಲ್ಲಿ ಮಹಿಳೆಯರಿದ್ದು, ಅದು ಶೇ. 20 ರಷ್ಟು ಕುಟುಂಬಗಳಲ್ಲಿ ಮಾತ್ರ. ಮಹಿಳೆಗೆ ಕೆಲವು ವಿಚಾರಗಳಲ್ಲಿ ಸ್ವಾತಂತ್ರ್ಯ ನೀಡಲಾಗಿದ್ದರೂ ಪುರುಷರ ಒಪ್ಪಿಗೆಯ ಅಂಕಿತ ಬೇಕು. ಇದಾವುದನ್ನು ವಿರೋಧಿಸುವ ಗೋಜಿಗೆ ಹೋಗದೆ ಅಸಹಾಯಕಳಾಗಿದ್ದಾಳೆ ಹಾಗೂ ಉಳಿವಿಗಾಗಿ, ಸಮಾಜದ ಮೂದಲಿಕೆಯಿಂದ ತಪ್ಪಿಸಿಕೊಳ್ಳಲು, ರಕ್ಷಣೆಗಾಗಿ, ಬೇರೆ ದಾರಿ ಕಾಣದೆ, ಗತಿಯಿಲ್ಲವೆಂಬಂತೆ ಅನಿವಾರ್ಯವಾಗಿ ಪುರುಷ ನಿರ್ಮಿತ ಧಾರ್ಮಿಕ ಬಂಧನದಲ್ಲಿ ಕೆಲವೊಮ್ಮೆ ಮಹಿಳೆಯರ ಸಂಪ್ರದಾಯದ ಕಪಿಮುಷ್ಠಿಯಲ್ಲಿ ಮಹಿಳೆ ಬಂಧಿಯಾಗಿದ್ದಾಳೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸ್ವಾತಂತ್ರ್ಯ ಮಹಿಳೆಗೆ ಲಭಿಸಿದ್ದರೂ ಭಾರತ ಅದಕ್ಕೆ ಅಪವಾದ ಅದರಲ್ಲಿಯೂ ಹಿಂದುಳಿದ ನಾಗಮಂಗಲ ತಾಲ್ಲೂಕಿನಂತಹ ಪ್ರದೇಶಗಳಲ್ಲಿ ಮಹಿಳಾ ಸಬಲೀಕರಣವನ್ನು ಕಾಲೇಜುಗಳಲ್ಲಿ ಹೆಚ್ಚಾಗಿರುವ ವಿದ್ಯಾರ್ಥಿನಿಯರ ಸಂಖ್ಯೆ, ಸ್ತ್ರೀ ಶಕ್ತಿ ಮತ್ತು ಮಹಿಳಾ ಸ್ವ–ಸಹಾಯ ಸಂಘಗಳ ಸಂಖ್ಯೆಯಿಂದಲೇ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳಲ್ಲಿ ಭಾಗವಹಿಸುವಿಕೆಯಿಂದ ಮಾತ್ರ ಅಳೆಯಲು ಸಾಧ್ಯವಿಲ್ಲ. ಅಲ್ಲಿಯೂ ಸಂಪೂರ್ಣ ಸ್ವಾತಂತ್ರ್ಯವಿರದ ಪ್ರಧಾನ ಅಂಶಗಳನ್ನು ಗುರ್ತಿಸಬಹುದು.

ಮಹಿಳೆಯ ಬೆತ್ತಲೆ ಮೆರವಣಿಗೆ, ಹೆಣ್ಣು ಶಿಶು ಹತ್ಯೆ, ಅತ್ಯಾಚಾರ, ಕೊಲೆ, ಬಹಿಷ್ಕಾರ, ಗೃಹಬಂಧನ, ಆಸಿಡ್‌ದಾಳಿ, ಗರ್ಭಗುಡಿ ಪ್ರವೇಶ (ಜಯಮಾಲಾ) ಪ್ರಕರಣ, ರ‍್ಯಾಗಿಂಗ್ ನಂತಹ ಆಧುನಿಕ ಮಹಿಳಾ ಸಂಬಧಿ ಶೋಷಣೆಗಳ ಪ್ರಕರಣಗಳು ಸಂಭವಿಸಿದಾಗ ಪಕ್ಕದಲ್ಲೇ ಇದ್ದ ಮಹಿಳೆಯರು ಪ್ರತಿರೋಧಿಸದಿರುವುದು, ಸಂಘಟಿತ ಹೋರಾಟದ ಮೂಲಕ ಯಶಸ್ಸು ಪಡೆಯಲು ಸಾಧ್ಯವಾಗದಿರುವುದು ಮಹಿಳಾ ಸಬಲೀಕರಣದ ಹಿನ್ನಡೆಯನ್ನು ಸೂಚಿಸುತ್ತದೆ.

**ಸಲಹೆಗಳು**

- ರಾಷ್ಟ್ರೀಯ ಮತ್ತು ರಾಜ್ಯ ಮಹಿಳಾ ಆಯೋಗಗಳು ಸಕ್ರಿಯವಾಗಬೇಕು.
- ಮಹಿಳಾ ಸಂಬಂಧಿ ವ್ಯಾಜ್ಯಗಳು ಬಹಳ ಬೇಗ ಇತ್ಯರ್ಥವಾಗಬೇಕು.
- ದೇವಾಲಯಗಳಿಗೆ ಮತ್ತು ಗರ್ಭಗುಡಿಗೆ ಮುಕ್ತ ಪ್ರವೇಶ ನೀಡಬೇಕು. ನೀಡದ ದೇವಾಲಯಗಳನ್ನು ಮುಚ್ಚಬೇಕು.

- ವಸ್ತ್ರ ಸಂಹಿತೆ ಇರಬಾರದು, ಕಡ್ಡಾಯವಾಗಿ ರದ್ದುಗೊಳಿಸಬೇಕು.
- ಪ್ರತಿಯೊಂದು ಊರಿನ ಪಂಚಾಯ್ತಿಗಳಲ್ಲಿ ಮಹಿಳೆಗೆ ಯಜಮಾನಿಕೆಗೆ ಅವಕಾಶ ಕಲ್ಪಿಸಬೇಕು.
- ಕುಟುಂಬಗಳಿಗೆ ಸರ್ಕಾರವು ಸೌಲಭ್ಯಗಳನ್ನು ನೀಡುವಾಗ ಆ ಕುಟುಂಬದ ಮಹಿಳೆಯರ ತೃಪ್ತಿ ಪ್ರಮಾಣ ಪತ್ರ ಪಡೆಯಬೇಕು.
- ಮಹಿಳೆಯರಿಗಾಗಿಯೇ ಪ್ರತ್ಯೇಕ ಮಹಿಳಾ ಹಿತರಕ್ಷಣಾ ಸಮಿತಿಯನ್ನು ಪ್ರತಿಗ್ರಾಮಗಳಲ್ಲಿಯೂ ರಚಿಸಬೇಕು.
- ಸಾಕ್ಷರತೆ ಕಾರ್ಯಕ್ರಮ ಇನ್ನಷ್ಟು ವಿಸ್ತಾರಗೊಳ್ಳಬೇಕು.
- ಆರೋಗ್ಯ ಮತ್ತು ಲೈಂಗಿಕ ಶಿಕ್ಷಣ ದೊರೆಯಬೇಕು. ಆಪ್ತ ಸಮಾಲೋಚಕರು ಪ್ರತಿಮನೆಗೂ ಭೇಟಿ ನೀಡಿ ಸಮಸ್ಯೆಗಳನ್ನು ಅರಿಯಬೇಕು.
- ಪ್ರಬಲ ಸಾಧನವಾದ ಸಮೂಹ ಮಾಧ್ಯಮಗಳಲ್ಲಿ ಮಹಿಳಾ ಸಬಲೀಕರಣದ ನಿದರ್ಶನಗಳನ್ನು ಪ್ರದರ್ಶಿಸಬೇಕು.
- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 1 ಪಂಚವಾರ್ಷಿಕ ಅವಧಿಯನ್ನು ಮಹಿಳೆಯರ ಅಭ್ಯುದಯಕ್ಕಾಗಿ ಮೀಸಲಿರಬೇಕು.
- ವೇದಗಳ ಕಾಲದಿಂದಲೂ ಶೋಷಣೆಗೆ ಒಳಗಾಗಿರುವ ಮಹಿಳೆಯರ ಸ್ಥಿತಿಗತಿಗೆ ಕಾರಣವಾಗಿರುವ ಅಂಶಗಳು, ಪುರುಷ ಪ್ರಾಧಾನ್ಯತೆ, ಮಹಿಳೆಯರ ಅಸಹಾಯಕತೆಯ ಅಂಶಗಳನ್ನು ಮಾಧ್ಯಮಗಳ ಮೂಲಕ ಪ್ರತಿಹಳ್ಳಿಗೆ ತಲುಪಿಸಬೇಕು.
- ಶೇ. 50 ರಷ್ಟು ಮಹಿಳಾ ಶಾಸಕಿಯರಿರುವಂತೆ ಮೀಸಲಾತಿ ನೀಡಬೇಕು.
- ಧಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು.
- ಮಹಿಳೆಗೆ ವಿಚಾರಶಿಕ್ಷಣ ನೀಡಬೇಕು.
- ಧರ್ಮಶಾಸ್ತ್ರಗಳ ಬಗ್ಗೆ ಮರು ಚಿಂತನೆ ನಡೆಯಬೇಕು, ಇತ್ಯಾದಿ

## ಉಪಸಂಹಾರ

ಧರ್ಮೋ ರಕ್ಷತಿಃ ರಕ್ಷತೆ ಹೇ ಎಂದರೆ ಧರ್ಮವನ್ನು ರಕ್ಷಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ ಎಂಬ ಮಾತು ಪುರುಷರ ರಕ್ಷಣೆಗಾಗಿ ಸ್ಥಾಪಿಸಲ್ಪಟ್ಟ ಧರ್ಮವನ್ನು ಕುರಿತು ಹೇಳಿರಬಹುದು ಎನ್ನಿಸುತ್ತದೆ. ಸ್ತ್ರೀಯರಿಗೆ ಪತಿವ್ರತಾಧರ್ಮ, ಸತಿಧರ್ಮ, ಸ್ತ್ರೀಧರ್ಮ ಇರುವಂತೆ ಪುರುಷರಿಗೆ ಕಟ್ಟುನಿಟ್ಟಾಗಿ ಪಾಲಿಸಬೇಕಾದ ಯಾವುದೇ ನಿರ್ಬಂಧಗಳಿಲ್ಲ, ಪುರುಷರಿಗೆ ಬಹಿಷ್ಕಾರಗಳಿಲ್ಲ, ಪೂಜ್ಯ ಸ್ಥಾನ, ಊಟದಲ್ಲಿ ಮೊದಲಿಗರು, ಮಾತ್ರ ಪ್ರಧಾನ ಕುಟುಂಬಗಳಲ್ಲಿ ಪುರುಷ ಪ್ರಾಧಾನ್ಯತೆ ಇವು ಪುರುಷನಿಗೆ ಸಮಾನವಾಗಿ ಮಹಿಳೆಯನ್ನು ಒಪ್ಪಿಕೊಳ್ಳದ ನೆಲೆ.

ಮಹಿಳಾ ಸಬಲೀಕರಣ ಇದರಿಂದ ಸಾಧ್ಯವೇ ಇಲ್ಲ. ಆದ್ದರಿಂದ ಯಾವ ಕೃತಿಗಳು, ಚಿಂತನೆಗಳು, ಸಾಹಿತ್ಯಗಳು, ಜನಪದಗಳು, ಮಹಿಳೆಯರ ಸಬಲೀಕರಣಕ್ಕೆ ಅಡ್ಡಿಯಾಗಿವೆಯೋ ಅವುಗಳನ್ನು ಮರು ವಿಮರ್ಶೆಗೆ ಒಳಪಡಿಸಿ ತಿದ್ದುಪಡಿ ಮಾಡುವ ಮೂಲಕ ಲಿಂಗಭೇದವನ್ನು ತಡೆಯದಿದ್ದರೆ ಬಹುಶಃ ಮಹಿಳೆ 2ನೇ ದರ್ಜೆಯಲ್ಲಿಯೇ ಇರಬೇಕಾಗುತ್ತದೆ.

## ಗ್ರಂಥಋಣ


1. ಮಹಿಳಾ ಸಾಮಾಜಿಕತೆ – ಡಾ॥ಜ್ಯೋತಿ ಶಶಿಕುಮಾರ್
2. ಸ್ತ್ರೀ ಪರ – ಡಾ॥ ಹಾಲತಿ ಸೋಮಶೇಖರ್
3. ಭಾರತೀಯ ಸಮಾಜ – **ಸಿ.ಎನ್. ಶಂಕರ್ ರಾವ್**
4. ಸಾಮಾಜಿಕ ಸಂಶೋಧನಾ ವಿಧಾನಗಳು – ಡಾ॥ ಆರ್. ಇಂದಿರಾ
5. ದಿನಪತ್ರಿಕೆಗಳು, ಮಂಡ್ಯ ಜಿಲ್ಲಾ ಗೆಜೆಟಿಯರ್